Balancing the Economic conditions of Municipalities in the State.

298. SRI L. T THIMMAPPA HEGDE (Sagar) —Will the Minister for Housing and Urban Development be pleased to state.—

(*a*) the annual income derived in the past from octroi in the State ;

(*b*) the amount of grant provided to the Town Municipalities by the Government in lieu of abolition of octroi ;

(*c*) whether it has come to the notice of Government that the Town Municipalities are experiencing hardship without this income ? if so the action taken by Government balance the economic conditions of these institutions ;

(*d*) the particulars of income derived from octroi during last year and the amount of grant provided in lieu there of ; in respect of each of the Town Municipalities in Shimoga District ?

SRI DHARAM SINGH (Minister for Housing and Urban Development).—

(*a*) Rs. 23.6 crores.

(*b*) On account grant of Rs. 23.6 crores has been sanctioned in the year 1979–80. A sum of Rs. 17.70 crores of 'on account grant' has been sanctioned during year 1980–81.

(*c*) Yes, Government is providing 'on account grant, to these Institutions in advance, in quarterly instalments, as the Scheme of providing relief towards octroi has not yet been finalised ; the question of taking final decision in this regard is under active consideration of Government.

(*d*) Statement showing the particulars is enclosed separately.

ಶ್ರೀ ಎಲ್. ಟಿ. ತಿಮ್ಮಪ್ಪ ಹೆಗ್ಗಡೆ.—ಸ್ವಾಮಿ, ಇದರಲ್ಲಿ ಮೊದಲ ವರ್ಷಕ್ಕೆ ಆಕ್ಟ್ರಾಯ್ ಬದಲಿಗೆ ಎಷ್ಟು ಆಕ್ಟ್ರಾಯನ್ನು ಕಳೆದುಕೊಳ್ಳುತ್ತಿದ್ದರೋ ಅಷ್ಟನ್ನೇ ಪುರಸಭೆಗಳಿಗೆ ಕೊಟ್ಟು ಹಾಗೆ ಆಗಿದೆ. ಆದರೆ ೧೯೮೦–೮೧ರಲ್ಲಿ ಕೊಟ್ಟಿರುವುದನ್ನು ನೋಡಿದಾಗ ಅದು ಕಡಿಮೆಯಾಗಿದೆ. ಆಕ್ಟ್ರಾಯ್‌ಗೆ ಬದಲಿ ಅರೇಂಜ್‌ಮೆಂಟ್ ಇಲ್ಲದಾಗ ಅದನ್ನು ಸರ್ಕಾರವೇ ಕೊಡಬೇಕು ಎಂದು ಏನಿದೆ ಅದರಂತೆ ಆ ಹಣವನ್ನು ಇತ್ತೀಚೆಗೆ ಕೊಟ್ಟಿದ್ದೀರಾ ? ಅಥವಾ ಆ ಹಣವನ್ನು ಇನ್ನು ಮುಂದೆ ಕೊಡುತ್ತೀರಾ ?

ಶ್ರೀ ಧರ್ಮಸಿಂಗ್.—ನೀವು ಈ ಪ್ರಶ್ನೆಯನ್ನು ಕೇಳಿದಾಗ ೧೯–೩–೧೯೮೧ರಲ್ಲಿ ನಾವು ಆ ಹಣವನ್ನು ರಿಲೀಸ್ ಮಾಡಿದ್ದೇವೆ. ಮತ್ತೆ ೩೦–೩–೧೯೮೧ರಲ್ಲಿ ರಿಮೈನಿಂಗ್ ಹಣವನ್ನು ಕೊಟ್ಟದ್ದು ಇದೆ. ೧೯೭೯–೮೦ರಲ್ಲಿ ಹಾಗೂ ೧೯೮೦–೮೧ರಲ್ಲಿ ಎಷ್ಟು ಹಣ ಆಕ್ಟ್ರಾಯ್‌ನಿಂದ ಸಿಕ್ಕುತ್ತಿತ್ತೋ ಅಷ್ಟು ಹಣವನ್ನು ಪೂರ್ಣವಾಗಿ ನಾವು ರಿಲೀಸ್ ಮಾಡಿದ್ದೇವೆ.

ಶ್ರೀ ಎಲ್. ಟಿ. ತಿಮ್ಮಪ್ಪ ಹೆಗ್ಗಡೆ.—ಈಗ ೨ ವರ್ಷದಿಂದ ಈ ಒಂದು ಪದ್ಧತಿಯಂತೆ ನಡೆಯಿತು. ಇನ್ನು ಮುಂದೆ ಇದರ ಬಗ್ಗೆ ಯಾವುದಾದರೂ ಬದಲಿ ಸಂಪನ್ಮೂಲ ಹುಡುಕುವುದಕ್ಕೆ ನೀವೇನಾದರೂ ತೀರ್ಮಾನ ಮಾಡಿದ್ದೀರಾ ? ಅಥವಾ ಇನ್ನು ಮುಂದೆ ಕೂಡ ಅದೇ ರೀತಿಯಲ್ಲಿ ಕೊಡುತ್ತಾ ಹೋಗುವುದು ಸರಿಯೇ ?

ಶ್ರೀ ಧರ್ಮಸಿಂಗ್.—೧೯೭೮ರಲ್ಲಿ ಆಕ್ಟ್ರಾಯ್ ಅಬಾಲಿಷ್ ಆದನಂತರ ನಾವು ೨೫.೬ ಕೋಟಿ ರೂಪಾಯಿಗಳಷ್ಟು ಆಕ್ಟ್ರಾಯ್ ಕಾಂಪನ್‌ಸೇಷನ್ ಕೊಡುತ್ತಿದ್ದೇವೆ. ಮೊದಲು ಅಲ್ಲಿ ಆಕ್ಟ್ರಾಯ್ ಎಷ್ಟು ವಸೂಲು ಆಗುತ್ತಿತ್ತು ಅದು ೧೯೭೮-೭೯ರಲ್ಲಿ ಹಾಗೂ ೧೯೭೯-೮೦ರಲ್ಲಿ ಹೆಚ್ಚಾಗಿದೆ. ಮತ್ತು ೧೯೮೦-೮೧ರಲ್ಲಿ ಅದು ಇನ್ನೂ ಹೆಚ್ಚಾಗಿದೆ. ಈ ಆಕ್ಟ್ರಾಯ್ ಅಬಾಲಿಷ್ ಆದನಂತರ ನಾವು ೨೫.೬ ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದೆವು ; ಈಗ ನಾವು ೨೭.೬ ಕೋಟಿ ರೂಪಾಯಿಗಳನ್ನು ರಿಲೀಸ್ ಮಾಡುತ್ತಿದ್ದೇವೆ. ನಾವು ಈಗಾಗಲೇ ೩೫ ಕೋಟಿ ರೂಪಾಯಿಗಳನ್ನು ರಿಲೀಸ್ ಮಾಡಿದ್ದೇವೆ. ಅಂದರೆ ೩೫ ಕೋಟಿ ರೂಪಾಯಿಗಳನ್ನು ನಾವು ಹೆಚ್ಚಾಗಿ ಕೊಡುತ್ತಿದ್ದೇವೆ. ಅವರು ಇನ್ನೂ ೫ ಪರ್ಸೆಂಟ್ ಜಾಸ್ತಿ ಕೊಡಬೇಕೆಂದು ಕೇಳುತ್ತಿದ್ದಾರೆ. ಆ ೫ ಪರ್ಸೆಂಟ್ ಗ್ರೋತ್ ಮೇಲೆ ಕೂಡ ಅದು ೩೫ ಕೋಟಿ ರೂಪಾಯಿಗಳಾಗುತ್ತದೆ. ಆ ಹೆಚ್ಚಿನ ಹಣವನ್ನು ನಾವು ಕೊಡುತ್ತೇವೆ.

ಶ್ರೀ ಪಂಪಾವತಿ.—ಅಧ್ಯಕ್ಷರೆ, ೧೯೭೮ರಲ್ಲಿ ಆಕ್ಟ್ರಾಯ್ ರದ್ದಾದಮೇಲೆ ಆದೇನೋ ೫ ಪರ್ಸೆಂಟ ಕೊಡುತ್ತಿದ್ದರು. ಇದು ಬಹಳ ಕಡಿಮೆಯಾಗುತ್ತದೆ. ಉದಾಹರಣೆಗೆ ದಾವಣಗೆರೆ ನಗರ ಬೆಳೆಯುತ್ತಿದೆ. ಇಲ್ಲಿಗೆ ಕೊಡತಕ್ಕ ಪಣ ಬಹಳ ಕಡಿಮೆ ಇರುವುದರಿಂದ ಇಲ್ಲಿನ ಯಾವ ಅಭಿವೃದ್ಧಿ ಕಾರ್ಯಗಳನ್ನೂ ಮಾಡುವುದಕ್ಕಾಗುತ್ತಿಲ್ಲ. ಒಂದು ಕಡೆ ನೌಕರರ ವೇತನ ಹಾಗೂ ಇತರ ಸೌಲಭ್ಯ ಜಾಸ್ತಿಯಾಗಿರುವುದರಿಂದ ಬರತಕ್ಕ ಆದಾಯ ಕಡಿಮೆ ಇರುವುದರಿಂದ ಬೇರೆ ಅಭಿವೃದ್ಧಿ ಕಾರ್ಯಕ್ರಮ ಹಾಕಿಕೊಳ್ಳುವುದಕ್ಕೆ ನಗರಸಭೆಗೆ ತೊಂದರೆಯಾಗುತ್ತಿದೆ. ಈ ೫ ಪರ್ಸೆಂಟ್ ಲೆಕ್ಕಕ್ಕೆ ಇಲ್ಲಿ. ಇದನ್ನು ಕನಿಷ್ಠ ೨೫ ಪರ್ಸೆಂಟ್‌ಗೆ ಏರಿಸಿದರೂ ಅದು ಸಾಲದಾಗುತ್ತದೆ. ಇದನ್ನು ಏರಿಸುವುದಕ್ಕೆ ಸರ್ಕಾರ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತದೆ ?

ಶ್ರೀ ಧರ್ಮಸಿಂಗ್.—೧೯೭೮ರಲ್ಲಿ ಆಕ್ಟ್ರಾಯ್ ತೆಗೆದುಹಾಕಲಾಯಿತು. ೫ ಪರ್ಸೆಂಟ್‌ಗೆ ಆ ಮೂರೂವರೆ ಕೋಟಿ ರೂಪಾಯಿ ಆಗುತ್ತಿತ್ತು. Already this Government h constituted the Gulhati Commission. ನಾನ್ ಟ್ಯಾಕ್ಸಬಲ್ ರೆವಿನ್ಯೂ ಹೇಗೆ ಹೆಚ್ಚು ಬೇಕೆನ್ನುವುದರ ಬಗ್ಗೆ ಜುಲೈನಲ್ಲಿ ರಿಪೋರ್ಟ್ ಬರುತ್ತಿದೆ. ಈಗಾಗಲೇ ೫ ಪರ್ಸೆಂಟ್ ಕೊಟ್ಟಿದ್ದು ಇನ್ನು ೫ ಪರ್ಸೆಂಟ್ ಬಗ್ಗೆ ಫೈನಾನ್ಸ್ ಡಿಪಾರ್ಟ್‌ಮೆಂಟ್‌ನವರು ರಿಲೀಸ್ ಮಾಡುತ್ತಿದ್ದಾರೆ. ಒಟ್ಟಿಗೆ ಕೋಟಿ ರೂಪಾಯಿ ಆಗುತ್ತದೆ.

SRI PRABHAKAR TELKAR.—Due to stoppage of octroi, the municipalities are not getting funds. By this the municipalities are finding difficulty in doing developmental works as well as for payment to employees. Will the Government think of re-introducing octroi in order to develop all these areas ? Whether the Government is going to think over this and take action to see that these municipal areas develop in a better manner ?

ಶ್ರೀ ಧರ್ಮಸಿಂಗ್. —ಈಗ ಸದ್ಯಕ್ಕೆ ಸರ್ಕಾರದಲ್ಲಿ ಆ ರೀತಿಯ ಪರಿಶೀಲನೆ ಇಲ್ಲ.

ಶ್ರೀ ಎಲ್ ಟಿ. ತಿಮ್ಮಪ್ಪ ಹೆಗ್ಗಡೆ.—ಆಕ್ಟ್ರಾಯ್ ಸಿಬ್ಬಂದಿ ಆಫೀಸ್ ಇದ್ದಾರೆ ಅವರಿಗೆ ಕೆಲಸ ಇಲ್ಲದೇ ಸಂಬಳ ಕೊಡುವ ಹಾಗೆ ಆಗಿದೆ. ಆಕ್ಟ್ರಾಯ್ ವಸೂಲಾತಿ ಇಲ್ಲದ ಮೇಲೆ ಇವರ ಅಗತ್ಯ ಏ ಸಮ್ಮನೆ ಇವರನ್ನು ಇಟ್ಟುಕೊಂಡಿರುವುದು ಯಾಕೆ ?

ಶ್ರೀ ಧರ್ಮಸಿಂಗ್.— ಆಕ್ಟ್ರಾಯ್ ಬಗ್ಗೆ ಕೆಲಸ ಮಾಡುತ್ತಿದ್ದ ಹೆಚ್ಚಿನ ಸಿಬ್ಬಂದಿಗೆ ಬೇರೆ ಹಾಕುವುದಕ್ಕೆ ನಾವು ಡೈರೆಕ್ಷನ್ ಕೊಟ್ಟಿದ್ದೇವೆ. ಎಲ್ಲೆಲ್ಲಿ ಇದ್ದಾರೆ ಅಲ್ಲಿ ತ್ವರಿತ ರೀತಿಯಲ್ಲಿ ಮಾಡುವು already we have given direction.